ದಿ: 05.02.2026

**ಪ್ರಭಾರ ಪ್ರಧಾನ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ.1390/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸವಿತಾ.ಹೆಚ್ | ಪ್ರಾ.ಸಾಃ 4 |
| ತಂದೆಯ/ಗಂಡನ ಹೆಸರು | : | ದ್ಯಾಮೇಶ್ | ಚಾ.ಸಾಃ 6 |
| ವಯಸ್ಸು | : | 42 ವರ್ಷ | |
| ಕೆಲಸ | : | ಅಬಕಾರಿ ನಿರೀಕ್ಷಕರು,<br>ದಾವಣಗೆರೆ ಉಪ ವಿಭಾಗ. | ಸಾ ಪ್ರ ಬೋ |
| ವಾಸ | : | ದಾವಣಗೆರೆ. | ದಿಃ05.02.2026. |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ನಾನು ದಿ.05.02.2024 ರಿಂದ 10.06.2024 ರವರೆಗೆ ಹೊಳಲ್ಕೆರೆ ವಲಯದ ಅಬಕಾರಿ ನಿರೀಕ್ಷಕರಾಗಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 17.04.2024 ರಂದು ಸಂಜೆ 04.00 ರ ಸಮಯದಲ್ಲಿ ನಾನು ಹೊಳಲ್ಕೆರೆ ಪಟ್ಟಣದಲ್ಲಿ ಗಸ್ತು ಕರ್ತವ್ಯ ಇದ್ದಾಗ, ಆರೋಪಿತರು ಹೊಳಲ್ಕೆರೆಯ ಲಂಬಾಣಿಹಟ್ಟಿ ಗ್ರಾಮದ ಅವರ ಮನೆಯಲ್ಲಿ ಅಕ್ರಮವಾಗಿ ಮಧ್ಯವನ್ನು ಇಟ್ಟುಕೊಂಡಿದ್ದಾರೆ ಎಂದು ಮಾಹಿತಿ ಬಂದಿರುತ್ತದೆ. ನಾನು ಸದರಿ ಮಾಹಿತಿಯ ಕುರಿತಾಗಿ ಚಾಸಾ-3 ಮತ್ತು ಚಾಸಾ-4 ರವರಿಗೆ ಮಾಹಿತಿಯನ್ನು ನೀಡಿ, ಸದರಿರವರನ್ನು ಹೊಳಲ್ಕೆರೆ ಲಂಬಾಣಿಹಟ್ಟಿ ಗ್ರಾಮದ ಬಳಿ ಕರೆದುಕೊಂಡು ಹೋಗಿರುತ್ತೇನೆ. ಹೊಳಲ್ಕೆರೆ ಲಂಬಾಣಿಹಟ್ಟಿ ಗ್ರಾಮಕ್ಕೆ ಹೋಗುವ ತಿರುವಿನ ಬಳಿ ಇದ್ದ ಚಾಸಾ-1 ಮತ್ತು 2 ರವರಿಗೆ ನಾನು ದಾಳಿ ಮಾಡುವ ಕುರಿತು ಮಾಹಿತಿಯನ್ನು ನೀಡಿ, ನೋಟೀಸ್‌ನ್ನು ನೀಡಿ, ಅವರನ್ನು ಸಹ ಠಾಣಾ ಜೀಪಿನಲ್ಲಿ ಕರೆದುಕೊಂಡು ಮಾಹಿತಿ ಬಂದ ಸ್ಥಳಕ್ಕೆ ಹೋಗಿರುತ್ತೇವೆ. ನಂತರ ಚಾಸಾ-1 ಮತ್ತು 2 ರವರಿಗೆ ಶೋಧನಾ ವಾರೆಂಟ್‌ನ್ನು ತಯಾರಿಸಿಕೊಂಡ ಬಗ್ಗೆ ನೋಟಿಸುಗಳನ್ನು ನೀಡಿ, ಚಾಸಾ-1 ಮತ್ತು 2 ರವರ ಸಹಿಗಳನ್ನು ಪಡೆದುಕೊಂಡಿರುತ್ತಾರೆ. ನಂತರ ನಾವೆಲ್ಲರೂ ಆರೋಪಿತರ ಮನೆಯ ಬಳಿ ಹೋದಾಗ ಆರೋಪಿ ನಮ್ಮನ್ನು ನೋಡಿ ಓಡಿ ಹೋಗಿರುತ್ತಾರೆ. ನಂತರ ಆರೋಪಿತರ ಮನೆಗೆ ಪ್ರವೇಶ ಮಾಡಿ ಆರೋಪಿತರ ಮನೆಯ ಹಾಲಿನ ಎಡಭಾಗದಲ್ಲಿ ಮರದ ಟೇಬಲ್ಲಿನ ಕೆಳಗೆ ಮೂರು ರಟ್ಟಿನ ಪೆಟ್ಟಿಗೆಗಳು ಮತ್ತು ಬಿಳಿ ಚೀಲ ಇದ್ದು, ಅದನ್ನು ನಮ್ಮ ಸಿಬ್ಬಂದಿಯವರು ಪರಿಶೀಲಿಸಲಾಗಿ, 90 ಎಂ.ಎಲ್‌ನ 2 ರಾಜಾವಿಸ್ಕಿಯ ಸೀಲು ಮಾಡಿರುವ ಬಾಕ್ಸ್ ಗಳು ಮತ್ತು 90 ಎಂ.ಎಲ್.ನ ಒರಿಜನಲ್ ಚಾಯ್ಸ್ ವಿಸ್ಕಿಯ ಒಂದು ಬಾಕ್ಸ್ ಇತ್ತು

ಹಾಗೂ ಚೀಲದಲ್ಲಿ 500 ಎಂ.ಎಲ್ 20 ಬಿಯರ್ ಟಿನ್ ಗಳು ಇದ್ದವು. ಒಟ್ಟು 25.970 ಲೀಟರ್ ಮಧ್ಯ ಇತ್ತು. ನಂತರ ಓಡಿ ಹೋದ ವ್ಯಕ್ತಿಯ ಹೆಸರು ಮತ್ತು ವಿಳಾಸವನ್ನು ತಿಳಿದುಕೊಂಡಿರುತ್ತೇವೆ, ನಂತರ ಅಮಾನತ್ತುಪಡಿಸಿಕೊಂಡ ಎಲ್ಲಾ ಮಧ್ಯದ ಪೌಚುಗಳ ಪೈಕಿ ತಲಾ 10 ಪ್ಯಾಕೆಟ್ ಗಳನ್ನು ರಾಸಯನಿಕ ಪರೀಕ್ಷಾ ವರದಿಗಾಗಿ ತೆಗೆದುಕೊಂಡಿರುತ್ತೇವೆ. ನಂತರ ಪಂಚರ ಸಮಕ್ಷಮ ಸಂಜೆ 05.00 ರಿಂದ 06.00 ಗಂಟೆಯವರೆಗೆ ಮಹಜರಿನ ಕ್ರಮವನ್ನು ಜರುಗಿಸಿ, ಮಧ್ಯದ ಪೌಚುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತೇವೆ. ಸಾಕ್ಷಿ ನೋಟಿಸಿನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, 1(ಬಿ) ಮತ್ತು 7(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಶೋಧನಾ ವಾರೆಂಟಿನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, 2(ಸಿ) ಎಂದು, ಪಂಚನಾಮೆಯಲ್ಲಿನ ಸಹಿಯನ್ನು ನಿಪಿ-3(ಸಿ) ಎಂದು, ಮಾಲು ಪಟ್ಟಿಯಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-4(ಸಿ) ಎಂದು, ಮಾದರಿ ಮೊಹರಿನಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-5(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-2 ರಲ್ಲಿ ಆರೋಪಿತನ ಸಹಿಯನ್ನು ನೋಡಿ ಗುರುತಿಸಿದ್ದು, ನಿಪಿ-2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ಮುದ್ದೆ ಮಾಲು-1 ರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಮುದ್ದೆ ಮಾಲು-1(ಸಿ) ಎಂದು ಗುರುತಿಸಲಾಯಿತು. ಅಮಾನತ್ತುಪಡಿಸಿಕೊಂಡ ಮಧ್ಯದ ಮಾಲಿನೊಂದಿಗೆ ಠಾಣೆಗೆ ಬಂದು ಸ್ವದೂರನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುತ್ತೇನೆ. ಸಾಕ್ಷಿ ಸ್ವದೂರನ್ನು ನೋಡಿ ಗುರುತಿಸಿದ್ದು, ನಿಪಿ-13 ಎಂದು, ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಪಿ-14 ಎಂದು, ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಮತ್ತು ಮುದ್ದೆ ಮಾಲನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿತರ ಪರ ಶ್ರೀ.ಯು.ಎಸ್ ವಕೀಲರಿಂದ**

3. ಘಟನಾ ಸ್ಥಳಕ್ಕೆ ಹೋಗುವ ಪೂರ್ವದಲ್ಲಿ ಹೊಳಲ್ಕೆರೆ ಟೌನಿನಲ್ಲಿ ಗಸ್ತು ಕರ್ತವ್ಯವನ್ನು ಮಾಡುತ್ತಿದ್ದೇವು. ಘಟನಾ ಸ್ಥಳಕ್ಕೆ ನಾನು ನನ್ನ ಸಿಬ್ಬಂದಿಗಳಾದ ಚಾಸಾ-3 ಮತ್ತು 4 ಹಾಗೂ ಪಂಚರಾದ ಚಾಸಾ-1 ಮತ್ತು 2 ರವರು ಹೋಗಿರುತ್ತೇವೆ. ನಮ್ಮ ಠಾಣಾ ಜೀಪಿನ ಚಾಲಕನ ಹೆಸರು ಗೋವಿಂದಪ್ಪ. ಸದರಿರವರನ್ನು ಈ ಪ್ರಕರಣದಲ್ಲಿ ಸಾಕ್ಷಿದಾರರಾಗಿ ಮಾಡಿಲ್ಲ. ತಾಂಡ್ಯಕ್ಕೆ ಹೋಗುವ ಕ್ರಾಸಿನ ಬಳಿ ಸಾಕ್ಷಿದಾರರು ಇದ್ದರು. ಪಂಚರು ಆರೋಪಿತರ ಮನೆಯನ್ನು ತೋರಿಸಿರುತ್ತಾರೆ. ಆರೋಪಿತರು ಸುಮಾರು 500 ಮೀಟರ್ ಅಂತರದಲ್ಲಿ ನಮ್ಮ ಠಾಣಾ ಜೀಪನ್ನು ನೋಡಿ ಓಡಿ ಹೋಗಿರುತ್ತಾರೆ. ಆರೋಪಿತರನ್ನು ಹಿಡಿಯಲು ಪ್ರಯತ್ನಿಸಿದ್ದು, ಸಿಕ್ಕಿರುವುದಿಲ್ಲ. ತಾಂಡ್ಯದಲ್ಲಿ ಅಕ್ಕ-ಪಕ್ಕದಲ್ಲಿ ಮನೆಗಳು ಇದ್ದ ಕಾರಣ ಹಿಡಿಯಲು ಆಗಲಿಲ್ಲ. ಆರೋಪಿತರೇ ಓಡಿ ಹೋದರೆ ಎಂದು ಸ್ಥಳೀಯರಾದ ಪಂಚರು ತಿಳಿಸಿರುತ್ತಾರೆ. ಚಾಸಾ-1 ಮತ್ತು 2 ರವರು ಆರೋಪಿತರೇ ಓಡಿ ಹೋಗಿರುತ್ತಾರೆ ನಮಗೆ ಮಾಹಿತಿಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲುಗಳನ್ನು ಸ್ಥಳದಲ್ಲಿಯೇ

ಅಮಾನತ್ತುಪಡಿಸಿಕೊಂಡು ಸೀಲು ಮಾಡಿರುತ್ತೇವೆ. ಎರಡೂ ಮುದ್ದೆ ಮಾಲುಗಳ ಚೀಟಿಗಳು ಬೇರೆ ಬೇರೆ ಇವೆ ಎಂದರೆ ಸರಿ. ಒಂದರಲ್ಲಿ ಸಹಿ ಇದ್ದು, ಮತ್ತೊಂದರಲ್ಲಿ ಸಹಿ ಇಲ್ಲ. ಎರಡರಲ್ಲೂ ಸಹಿ ಮಾಡಲು ತೊಂದರೆ ಇರಲಿಲ್ಲ. ಒಂದು ಚೀಟಿ ಮುದ್ರಿತ ಚೀಟಿಯಾಗಿದ್ದು ಮತ್ತೊಂದು ಚೀಟಿ ಕೈಬರಹದಲ್ಲಿ ಇದೆ ಎಂದರೆ ಸಾಕ್ಷಿ ನಾವು ಒಂದು ಮುದ್ರಿತ ಚೀಟಿಯನ್ನು ತೆಗೆದುಕೊಂಡು ಹೋಗಿದ್ದೇವು ಎಂದು ಹೇಳುತ್ತಾರೆ. ಅಮಾನತ್ತುಪಡಿಸಿಕೊಂಡ ಬಾಕ್ಸ್‌ಗಳೊಂದಿಗೆ ರಾಸಾಯನಿಕ ಪರೀಕ್ಷಾ ವರದಿಗೆ ಕಳುಹಿಸಿದ್ದು, ಉಳಿದ ಮಾಲನ್ನು ಕಛೇರಿಯಲ್ಲಿಯೇ ಇಟ್ಟುಕೊಂಡು ನಂತರ ಅವುಗಳನ್ನು ವಿಲೇ ಮಾಡುತ್ತೇವೆ. ಆ ಕುರಿತು ಚಾಸಾ-9 ಮತ್ತು 10 ರವರಿಗೆ ಮಾಹಿತಿ ಇದೆ. ಅಮಾನತ್ತುಪಡಿಸಿಕೊಂಡ ಮಧ್ಯದ ಪೌಚುಗಳಿಗೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ನಮ್ಮ ಸಿಬ್ಬಂದಿಯಾದ ಚಾಸಾ-3 ರವರು ಬರೆದಿರುತ್ತಾರೆ. ಮಹಜರಿನಲ್ಲಿ ಅಮಾನತ್ತು ಪಡಿಸಿಕೊಂಡ ಮಧ್ಯದ ಪೌಚುಗಳು ಉತ್ಪಾದನಾ ದಿನಾಂಕ, ಘಟಕ, ಸ್ಥಳ ಮತ್ತು ಬ್ಯಾಚ್ ಸಂಖ್ಯೆ ಕುರಿತು ಉಲ್ಲೇಖ ಮಾಡಿಲ್ಲ. ಓಡಿ ಹೋದರವರ ಚಹರೆಯ ಕುರಿತು ಉಲ್ಲೇಖ ಮಾಡಿಲ್ಲ. ಓಡಿ ಹೋದ ಮಹಿಳೆ ಸೀರೆಯನ್ನು ಉಟ್ಟಿದ್ದರು. 500 ಮೀಟರ್ ಅಂತರದಲ್ಲಿ ನೋಡಿದ್ದರಿಂದ ಆರೋಪಿತರ ಮುಖವನ್ನು ಗುರುತಿಸಲು ನಮಗೆ ಆಗಲಿಲ್ಲ. ಆರೋಪಿ ನಂತರ ನಮ್ಮ ಕಛೇರಿಗಿ ಬಂದಿದ್ದರು ಹಾಗಾಗಿ ಆರೋಪಿಯನ್ನು ಗುರುತಿಸಲು ಆಗುತ್ತದೆ. ನಾನು ಆರೋಪಿಯನ್ನು ನೋಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಮುದ್ದೆ ಮಾಲಿಗೂ ಯಾವುದೇ ಸಂಬಂಧ ಇಲ್ಲದಿದಾಗ್ಯೂ ಅಂಕೆ ಸಂಖ್ಯೆಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ. ಹೇ. ಕೇ. ಸರಿಯಿದೆ.

ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ